**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No.7902021

CW - 7 PW - 5

| | | |
|---|---|---|
| ಹೆಸರು | ಃ | ಚನ್ನರಾಜ ನಾಯಕ |
| ತಂದೆಯ ಹೆಸರು | ಃ | ತಗಡೂರು ನಾಯಕ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | PC |
| ವಾಸ | ಃ | ಕನಕಪುರ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 06.08.2024.

ನಾನು ದಿನಾಂಕ ಃ28.01.2020 ರಿಂದ 24.07.2024 ರವರೆಗೆ ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಚಾಸಾ-9 ರವರ ಆದೇಶದ ಮೇರೆಗೆ Cr. 129/2021 ರ ಪ್ರಕರಣದಲ್ಲಿ 32, 34 KE Act U/s 5(1) KED Act ರಡಿಯಲ್ಲಿ MC Dowell's Brandy 90 ml , Old TaverinWhisky 90 ml ಒಂದೊಂದು ಸ್ಯಾಚೆಟ್ ಗಳನ್ನು FSL ಪರೀಕ್ಷೆಗಾಗಿ ದಿನಾಂಕ 14.06.2021 ರಂದು ಚನ್ನಪಟ್ಟಣ ಉಪ ವಿಭಾಗ ಕ್ಕೆ ಹೋಗಿ ಮೇಲಾಧಿಕಾರಿಗಳ ಅನುಮೋದನೆ ಪಡೆದು ನಂತರ ದಿನಾಂಕ 16.06.2021 ರಂದು ಬೆಂಗಳೂರಿನ ಮಡಿವಾಳ FSL ಗೆ ರಾಸಾಯನಿಕ ಪರೀಕ್ಷೆಗಾಗಿ ಅವುಗಳನ್ನು ಕೊಟ್ಟು ಸ್ವೀಕೃತಿ ಪತ್ರವನ್ನು ತೆಗೆದುಕೊಂಡು ಬಂದಿರುತ್ತೇನೆ. ನಂತರ ಚಾಸಾ-9 ರವರಿಗೆ ವರದಿಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ. 1 ಮತ್ತು 2 ಅನ್ನು ಠಾಣೆಯಿಂದ ತೆಗೆದುಕೊಂಡು FSL ಪರೀಕ್ಷೆಗೆ ಹೋಗಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ದಿನಾಂಕ 14.06.2021 ರಂದು ನನ್ನನ್ನು ಮು.ಮಾ. 1 ಮತ್ತು 2 ಅನ್ನು FSL ಗೆ ತೆಗೆದುಕೊಂಡು ಹೋಗಲು ನೇಮಿಸಿದ್ದರು. ದಿನಾಂಕ 16.06.2021 ರಂದು FSL ಗೆ ತೆಗೆದುಕೊಂಡು ಹೋಗಿದ್ದೇನೆ. ನನ್ನನ್ನು ನೇಮಿಸಿದ 2 ದಿನಗಳ ನಂತರ FSL ಗೆ ಮು.ಮಾ. 1

ಮತ್ತು 2 ಅನ್ನು ತೆಗೆದುಕೊಂಡು ಹೋಗಿರುತ್ತೇನೆ. ಸದರಿ Acknowledgement ಗೆ ಮೇಲಾಧಿಕಾರಿಗಳ ಸಹಿ ಮಾಡಿಸಿಲ್ಲ, ನನ್ನನ್ನು ಯಾವುದೇ FSL ವಸ್ತುಗಳನ್ನು ತೆಗೆದುಕೊಂಡು ಹೋಗಲು ನೇಮಿಸಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ಮತ್ತು 2 ಅನ್ನು ಚೀಲದಲ್ಲಿ ಹಾಕಿ ಕಟ್ಟಿಕೊಟ್ಟಿದ್ದರು.

ಮರುವಿಚಾರಣೆಃ ಏನೂ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ

**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No.376/2011

CW -2 PW - 2

| | | |
|---|---|---|
| ಹೆಸರು | ಃ | ಮುನಿರಾಜು |
| ತಂದೆಯ ಹೆಸರು | ಃ | ರಾಮಜೋಗಯ್ಯ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ವಲಸಿ ಗ್ರಾಮ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 15.09.2022

ಆರೋಪಿ ಗೊತ್ತು. ಅವರು ನಮ್ಮ ಊರಿನವರು. ಚಾಸಾ-1 ಗೊತ್ತು. ಅವರು ಈಗ ತೀರಿಕೊಂಡಿರುತ್ತಾರೆ. ಚಾಸಾ-3 ಗೊತ್ತಿಲ್ಲ. ಚಾಸಾ-4 ಗೊತ್ತು.

ಪೋಲೀಸರು ನನಗೆ ಒಂದು ದಾಖಲೆ ತೋರಿಸಿ ಅದರಲ್ಲಿ ನನ್ನ ಸಹಿ ಪಡೆದರು. ಸದರಿ ದಾಖಲೆ ಮಹಜರ್ ಆಗಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಪೊಲೀಸರ ಕೋರಿಕೆಯ ಮೇರೆಗೆ ನಿಪಿ-5 ಕ್ಕೆ ನಮ್ಮ ಊರಿನಲ್ಲಿ ಸಹಿ ಹಾಕಿರುತ್ತೇನೆ. ನಿಪಿ 5 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಮು.ಮ-1 ರಿಂದ 3 ರ ಮೇಲೆ ನನ್ನ ಸಹಿ ಪಡೆದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 23.11.2010 ರಂದು ಮದ್ಯಾಹ್ನ 4 ಗಂಟೆ ಸಮಯದಲ್ಲಿ ಬಾಣಿನಾಯಕನದೊಡ್ಡಿ ಗ್ರಾಮದಲ್ಲಿರುವ ಆರೋಪಿಯ ಮನೆಯಲ್ಲಿ ಅಕ್ರಮವಾಗಿ 6 ಲೀಟರ್ ಭಟ್ಟಿ ಸಾರಾಯಿಯನ್ನು ಸಂಗ್ರಹ ಮಾಡಿದ್ದಾರೆಂಬ ಮಾಹಿತಿ ಮೇರೆಗೆ ಅಬಕಾರಿ ಉಪನಿರೀಕ್ಷಕರು ಹಾಗೂ ಸಿಬ್ಬಂದಿಗಳು ಮತ್ತು ಪಂಚರಾದ ನಮ್ಮೊಂದಿಗೆ ಆರೋಪಿಯ ಮನೆಗೆ ಹೋಗಿ ದಾಳಿ ಮಾಡಲಾಗಿ ರಾಗಿ ತುಂಬಿರುವ ವಾಡೆಯಲ್ಲಿ ಪ್ಲಾಸ್ಟಿಕ್ ಬಾಟಲ್ ಗಳು ಕಂಡು ಬಂದವು. ಅದನ್ನು ಅನುಮಾನಸ್ಪದವಾಗಿ ತೆರೆದು ನೋಡಲಾಗಿ ಅದರಲ್ಲಿ ದ್ರವ ರೂಪದ ವಸ್ತು ಇದ್ದು, ಘಾಟು

ವಾಸನೆಯಿಂದ ಕೂಡಿತ್ತು. ತಲಾ 3 ಪ್ಲಾಸ್ಟಿಕ್ ಬಾಟಲ್ ಗಳಲ್ಲಿ 6 ಲೀಟರ್ ಭಟ್ಟಿ ಸಾರಾಯಿ ಕಂಡು ಬಂದಿರುತ್ತದೆ. ಆ ದಾಸ್ತಾನು ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಸದರಿ ದಾಸ್ತಾನುವಿನಲ್ಲಿ 180 ಎಂಎಲ್ ನಂತೆ 3 ಬಾಟಲ್ ಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ಆ ಬಾಟಲ್ ಗಳಿಗೆ ಬಟ್ಟೆ ಸುತ್ತಿ ದಾರ ಕಟ್ಟಿ ಹರಗು ಹಾಕಿ ಬಾಟಲ್ ಗಳಿಗೆ ಅಂಟಿಸಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದಃ**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ